| | | | |
|---|---|---|---|
| 4 | ಬಿಲ್ ಅಂಡ್ ಬೇಲ್ ಪಿಂಗಲ್ ಇಂಜಿನ್ ಹೆಲಿಕಾಪ್ಟರ್ ಬೇಲ್ 206 ಎಲ್ 3 | 4 ಪ್ರಯಾಣಿಕರು | 70,000–00 |
| 5 | ಟ್ವಿನ್ ಇಕ್ವಿರಲ್ ಎ.ಎಸ್ 355 ಎಫ್ 1 ಟ್ವಿನ್ ಇಂಜಿನ್ ಹೆಲಿಕಾಪ್ಟರ್ | 3 ಪ್ರಯಾಣಿಕರು | 85,000–00 |

ಈ) ಯಾರು ಯಾರಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಲಾಗುವುದು?

ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಇತರೆ ಗಣ್ಯ ವ್ಯಕ್ತಿಗಳ ಅಧಿಕೃತ ಪ್ರವಾಸ ಕಾರ್ಯಕ್ರಮಗಾಗಿ ಈ ಕೆಳಕಂಡ ಸಂಸ್ಥೆಗಳಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದು ಕೊಳ್ಳಲಾಗುತ್ತದೆ.

1. ಮೆ: ಹಿಂದೂಸ್ಥಾನ್ ಏರೋನಾಟಿಕ್ ಲಿಮಿಟೆಡ್, ಬೆಂಗಳೂರು (ವೆಟ್ ಲೀಸ್ ಆಧಾರದ ಮೇಲೆ)
2. ಮೆ: ಡೆಕ್ಕನ್ ಏವಿಯೇಷನ್ಸ್, ಬೆಂಗಳೂರು.
3. ಮೆ: ಯು.ಬಿ. ಏರ್ ಲಿಮಿಟೆಡ್, ಬೆಂಗಳೂರು
4. ಮೆ: ಇಂಡಿಯನ್ ಏರ್‌ಫೋರ್ಸ್, ರಕ್ಷಣಾ ಇಲಾಖೆ. ಯಲಹಂಕ, ಬೆಂಗಳೂರು.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1178(1336)**
**ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಭಾಗೀರಥಿ (ಕೊಟ್ಟೂರು)**
**ಉತ್ತರಿಸುವ ಸಚಿವರು : ಶ್ರೀ. ಸಿ.ಎಂ.ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

1) 2004–05 ಮತ್ತು 2006–07ನೇ ಸಾಲಿನಲ್ಲಿ ಕೊಡ್ಲಿಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಕೂಡ್ಲಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ 2004–05 ಮತ್ತು 2006–07ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿರುತ್ತದೆ.

| ಕ್ರ ಸಂ | ವಿವರ | ಬಿಡುಗಡೆಯಾದ ಹಣ (ರೂ.ಲಕ್ಷಗಳಲ್ಲಿ) | |
|---|---|---|---|
| | | 2004–05 | 2006–07 |
| 1 | ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ–3054 | 41.23 | 109.43 |
| 2 | 12ನೇ ಹಣಕಾಸು (ರಸ್ತೆ ನಿರ್ವಹಣೆ | – | 57.95 |

| | | |
|---|---|---|
| ಒಟ್ಟು | 41.23 | 167.38 |

2 ಈ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುತ್ತದೆ.

3. ಬಂದಿದ್ದಲ್ಲಿ ಪರಿಹಾರಕೆ ಯಾವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿದೆ?

ಕುಡಿಯುವ ನೀರಿನ ಸಮಸ್ಯೆ ಕಂಡು ಬಂದ ಗ್ರಾಮಗಳಲ್ಲಿ ಪರಿಹಾರಕ್ಕಾಗಿ ಈ ಕೆಳಗಿನಂತೆ ಹಣ ಬಿಡುಗಡೆಯಾಗಿರುತ್ತದೆ.

| ಕ್ರ. ಸಂ. | ಯೋಜನೆ | ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1 | ರಾಜ್ಯವಲಯ | 2215 | 92.16 |
| 2 | ಕೇಂದ್ರವಲಯ | 4215 | 323.44 |
| | ಒಟ್ಟು: | | 415.60 |

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1176(1334)**
**ಮಾನ್ಯ ಸದಸ್ಯರ ಹೆಸರು : ಶ್ರೀ. ಬಸವರಾಜ್ ರಾಯರೆಡ್ಡಿ (ಯಲಬುರ್ಗಾ)**
**ಉತ್ತರಿಸುವ ಸಚಿವರು : ಶ್ರೀ. ಕೆ.ಎಸ್.ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ ರಾಜ್ಯದ ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಹಾಗೂ ಕುಡಿಯುವ ನೀರಿಗಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆಯೇ;

ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ, ಕಾವೇರಿ ಜಲಾನಯನ ಪ್ರದೇಶದಲ್ಲಿ, ನೀರಾವರಿಗಾಗಿ 250.62 ಟಿ.ಎಂ.ಸಿ ಮತ್ತು ಗೃಹಬಳಕೆ ಹಾಗೂ ಕೈಗಾರಿಕಾ ಬಳಕೆಗಾಗಿ 1.85 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ

ಆ) ಈ ತೀರ್ಪಿನಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಅದೇಶದ ಕುರಿತು ತೆಗೆದುಕೊಳ್ಳಬಹುದಾದ ಮುಂದಿನ ಕ್ರಮಗಳ ಬಗ್ಗೆ ನ್ಯಾಯವಾದಿಗಳ ಅಭಿಪ್ರಾಯದಂತೆ ಭಾರತ ಸಂವಿಧಾನದ ಅನುಚ್ಛೇದ 131 ಹಾಗೂ 136ರ ಅಡಿ